ಕಡಿಮೆಯಾಗುತ್ತದೆ. ಅತ್ಯಾವಶ್ಯಕವಾಗಿ ಇದು ಆಗಲೇಬೇಕಾಗಿದೆ. ಏಕೆಂದರೆ ಇದನ್ನು ನಬಾರ್ಡ್‌ಗೆ ಸೇರಿಸುವಾಗಲೇ ಇದರ ವಿಚಾರವನ್ನೆಲ್ಲಾ ಸಮಗ್ರವಾಗಿ ನಾವು ಯೋಚನೆ ಮಾಡಿದ್ದೇವೆ. ಈಗ ಮತ್ತೆ ಫಾರೆಸ್ಟ್‌ನವರಿಗೆ ಕಳುಹಿಸುತ್ತೇವೆ, ಕೇಂದ್ರ ಸರ್ಕಾರದಿಂದ ಬರಬೇಕೆಂದರೆ ಎಷ್ಟು ವರ್ಷವಾಗುತ್ತದೆ ? ಇದನ್ನು ಮಾಡುವುದಕ್ಕಾಗುತ್ತದೆಯೇ ಇಲ್ಲವೇ ಎನ್ನುವುದನ್ನಾದರೂ ಹೇಳಬೇಕಾಗುತ್ತದೆ. ಏಕೆಂದರೆ ಕೇಂದ್ರ ಸರ್ಕಾರದಿಂದ ಬರುವುದು ನಿಜಕ್ಕೂ ಸಾಧ್ಯತೆ ಬಹಳ ಕಡಿಮೆ ಇದೆ. ಇದರ ಬಗ್ಗೆ ಸರ್ಕಾರ ಏನು ಮಾಡುತ್ತದೆ? ಇದನ್ನು ಎಷ್ಟು ದಿವಸದಲ್ಲಿ ಎಷ್ಟು ತಿಂಗಳಲ್ಲಿ ಇದನ್ನು ಪರಿಹಾರ ಮಾಡುತ್ತೀರಿ ?

ಶ್ರೀ ಉಮೇಶ್ ವಿ. ಕತ್ತಿ : ಈ ಸೇತುವೆ ಫಾರೆಸ್ಟ್ ಏರಿಯಾದಲ್ಲಿ ಬರುವುದರಿಂದ ಈ ಕಾರ್ಯಕ್ರಮವನ್ನು ನಾವು ಮಾಡುವುದಕ್ಕಾಗುತ್ತಿಲ್ಲ. ಫಾರೆಸ್ಟ್ ಕ್ಲಿಯರೆನ್ಸ್ ತೆಗೆದುಕೊಳ್ಳುವ ವರೆಗೆ ಈ ಸೇತುವೆಯನ್ನು ಕಟ್ಟುವುದಕ್ಕಾಗುವುದಿಲ್ಲ ಎಂದು ತಿಳಿಸುತ್ತೇನೆ. ಆದರೆ ಫಾರೆಸ್ಟ್ ಕ್ಲಿಯರೆನ್ಸ್ ಸಲುವಾಗಿ ಸರ್ಕಾರ ಈಗಾಗಲೇ ಕಾಗದಪತ್ರಗಳನ್ನು ಸಬ್‌ಮಿಟ್ ಮಾಡಿ ಕ್ಲಿಯರೆನ್ಸ್ ತೆಗೆದುಕೊಳ್ಳುವ ಪ್ರಯತ್ನವನ್ನು ಮಾಡುತ್ತೇವೆ. ಕ್ಲಿಯರೆನ್ಸ್ ಬಂದತಕ್ಷಣ ಈ ಕಾರ್ಯಕ್ರಮವನ್ನು ಮಾಡುತ್ತೇವೆ ಎಂದು ತಮ್ಮ ಮುಖಾಂತರ ತಿಳಿಸುತ್ತೇವೆ.

ದಕ್ಷಿಣ ಕನ್ನಡ ಜಿಲ್ಲೆಯನ್ನು ಪ್ರವಾಸೋದ್ಯಮ ಜಿಲ್ಲೆಯನ್ನಾಗಿ ಘೋಷಣೆ

122 (868) ಶ್ರೀ ಎನ್. ಯೋಗಿಶ್ ಭಟ್ (ಮಂಗಳೂರು) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ದಕ್ಷಿಣ ಕನ್ನಡ ಜಿಲ್ಲೆಯನ್ನು ಪ್ರವಾಸೋದ್ಯಮಜಿಲ್ಲೆಯನ್ನಾಗಿ ಘೋಷಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ ?

ಆ) ಹಾಗಿಲ್ಲದಿದ್ದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಪ್ರವಾಸೋದ್ಯಮ ಅಭಿವೃದ್ಧಿಗೊಳಿಸಲುಸರ್ಕಾರ ಹಾಕಿಕೊಂಡಿರುವ ಯೋಜನೆಗಳು ಯಾವುವು ?

ಇ) ಪಿಲಿಕುಲ ನಿಸರ್ಗಧಾಮ ಅಭಿವೃದ್ಧಿಗೊಳಿಸಲು ಸರ್ಕಾರ ಹಾಕಿಕೊಂಡಿರುವ ಕಾರ್ಯಕ್ರಮಗಳೇನು?

ಶ್ರೀ ಜೆ. ಹೆಚ್. ಪಟೇಲ್ (ಮುಖ್ಯಮಂತ್ರಿಗಳು) :

ಅ) ಇಲ್ಲ.

ಆ) 1) ಉಳ್ಳಾಲದ ಸೈಯದ್ ಮದನಿದರ್ಗಾಹಾಗೂ ಜೈನ ಬಸದಿಯ ಕೂಡುರಸ್ತೆಅಭಿವೃದ್ಧಿಗಾಗಿ ರೂ. 8.00 ಲಕ್ಷವನ್ನು ಬಿಡುಗಡೆ ಮಾಡಲಾಗಿದೆ.

2) ಸೂರತ್ಕಲ್ ಕಡಲತೀರ ರಸ್ತೆ ಅಭಿವೃದ್ಧಿಗಾಗಿ ರೂ. 5.00 ಲಕ್ಷವನ್ನು ಬಿಡುಗಡೆಮಾಡಲಾಗಿದೆ.

3) ಸೂರತ್ಕಲ್ ಬೀಚ್ ರಸ್ತೆ ಅಭಿವೃದ್ಧಿಗಾಗಿ ಪ್ರಸ್ತುತ ಸಾಲಿನಲ್ಲಿ ರೂ. 4.00ಲಕ್ಷ ಬಿಡುಗಡೆ ಮಾಡಲಾಗಿದೆ.

4) ಮಂಗಳೂರಿನಲ್ಲಿ ಪ್ರವಾಸಿ ಮಾಹಿತಿ ಕೇಂದ್ರವನ್ನು ಕರ್ನಾಟಕ ರಾಜ್ಯ ಭೂಸೇನಾ ನಿಗಮದವರಿಂದ ರೂ. 20.00ಲಕ್ಷದಲ್ಲಿ ನಿರ್ಮಿಸಲಾಗುತ್ತಿದೆ.

5) ಪ್ರಸ್ತುತ ಸಾಲಿನಲ್ಲಿ ಕೇಂದ್ರಯೋಜನೆಯಡಿ ಮಂಗಳೂರಿನಲ್ಲಿರುವ ಹೋಟೆಲ್ ಮಯೂರ, ನೇತ್ರಾವತಿ ಕಟ್ಟಡವನ್ನು ರೂ. 16.00ಲಕ್ಷ ಅಂದಾಜಿನಲ್ಲಿ ಉನ್ನತೀಕರಿಸಲಾಗುತ್ತಿದೆ. ಈ ಯೋಜನೆಗೆ ಕೇಂದ್ರಸರ್ಕಾರವು 11.02 ಲಕ್ಷ ರೂಗಳನ್ನು ಮಂಜೂರು ಮಾಡಿದೆ.

ಇ) 1) ಪಿಲಿಕುಲ ನಿಸರ್ಗಧಾಮದ ರಸ್ತೆ ಅಭಿವೃದ್ಧಿಗಾಗಿ ಪ್ರವಾಸೋದ್ಯಮ ಇಲಾಖೆಯಿಂದ ರೂ. 10.00 ಲಕ್ಷವನ್ನು ಬಿಡುಗಡೆ ಮಾಡಲಾಗಿದೆ.

2) ಟಾಯಟ್ರೇನ್ ಆಳವಡಿಸಲು ರೂ. 10.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

3) ಪ್ರಸ್ತುತ ಸಾಲಿನಲ್ಲಿ ಕೇಂದ್ರ ಯೋಜನೆಯಡಿಯಲ್ಲಿ ಪಿಲಿಕುಲ ನಿಸರ್ಗಧಾಮದಲ್ಲಿ ಪ್ರವಾಸಿ ಕುಟೀರಗಳನ್ನು ನಿರ್ಮಿಸಲು ಸುಮಾರು ರೂ. 36. 50 ಲಕ್ಷಗಳ ಅಂದಾಜಿನಲ್ಲಿ ಯೋಜನೆಗಳನ್ನು ಹಮ್ಮಿಕೊಂಡಿದೆ. ಈಯೋಜನೆಗೆ ಕೇಂದ್ರ ಸರ್ಕಾರವು ರೂ. 28.04 ಲಕ್ಷಗಳನ್ನು ಮಂಜೂರು ಮಾಡಿ ಮೊದಲನೆ ಕಂತಿನ ಹಣವಾಗಿ ರೂ. 8.40 ಲಕ್ಷಗಳನ್ನು ಬಿಡುಗಡೆ ಮಾಡಿದೆ.

4) ಪ್ರಸ್ತುತ ಸಾಲಿನಲ್ಲಿ ಪಿಲಕುಲ ನಿಸರ್ಗಧಾಮಕ್ಕೆ ಬೋಟುಗಳನ್ನು ಕೊಳ್ಳಲುರೂ. 1. 50 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

ಶ್ರೀ ಎನ್. ಯೋಗೇಶ್ ಭಟ್ : ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯನ್ನು ಪ್ರವಾಸೋದ್ಯಮ ಜಿಲ್ಲೆಯನ್ನಾಗಿ ಘೋಷಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ ಎಂದು ಕೇಳಿದ್ದೆ ಇಲ್ಲ ಎಂದು ಹೇಳಿದ್ದಾರೆ. ಇದನ್ನು ಘೋಷಣೆ ಮಾಡುವುದರಲ್ಲಿ ಯಾವ ತೊಂದರೆ ಇದೆ ? ಇದು ಒಂದನೆಯ ಪ್ರಶ್ನೆ ವಿಶೇಷವಾಗಿ ಪ್ರವಾಸೋದ್ಯಮ ಕೇಂದ್ರ ಸಚಿವರು ಮಂಗಳೂರಿಗೆ ಬಂದಾಗ ಆ ರೀತಿ ಘೋಷಣೆ ಮಾಡಿದಲ್ಲಿ ಅನೇಕ ರೀತಿಯಲ್ಲಿ ಕೇಂದ್ರದ ಸಹಾಯ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಅನೇಕ ಯೋಜನೆಗಳಿಗೆ ಕೇಂದ್ರ ಸಹಾಯವನ್ನು ಮಾಡಲಿಕ್ಕಾಗುತ್ತದೆ ಎಂದು ಹೇಳಿದ್ದ ಹಿನ್ನಲೆಯಲ್ಲಿ ತಮಗೆ ಆ ರೀತಿ ಘೋಷಣೆ ಮಾಡುವಲ್ಲಿ ಏನು ತಪ್ಪು ಇದೆ ? ಇದಕ್ಕೆ ಸಂಬಂಧಪಟ್ಟ ನೀಲಿ ನಕಾಶೆಗಳನ್ನು ಏನಾದರೂ ತಯಾರಿಸುವಂಥ ಆಲೋಚನೆ ಇದೆಯೇ ? ಇದಕ್ಕೆ ಉತ್ತರಿಸಬೇಕೆಂದು ಕೇಳುತ್ತೇನೆ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ : ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯನ್ನು ಸಂಪೂರ್ಣವಾಗಿ ಪ್ರವಾಸೋದ್ಯಮ ಎಂದು ಘೋಷಣೆ ಮಾಡುವುದು ಅಷ್ಟು ಸೂಕ್ತವಲ್ಲ. ಯೋಗೇಶ್ ಭಟ್ ರವರು ಹೇಳಿದ ಹಾಗೆ ಈಗಾಗಲೇ ಕೇಂದ್ರ ಸರ್ಕಾರದಿಂದ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರವಾಸೋದ್ಯಮ ಬೆಳವಣಿಗೆಗೆ ಸಾಕಷ್ಟು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಆ ಹಿನ್ನೆಲೆಯಲ್ಲಿ ಮಂಗಳೂರು ನಗರವನ್ನು ಹೊರತುಪಡಿಸಿ ಉಳಿದ ತಾಲ್ಲೂಕುಗಳನ್ನು ಸಿ ಗುಂಪಾಗಿ ನಾವು ಪರಿಗಣಿಸಿದ್ದೇವೆ. ಈ ಗುಂಪಿನಲ್ಲಿ ಮೂಡುಬಿದರೆ, ವಾರಂಗ, ಸೂರತ್‌ಕಲ್, ಪಣಂಬೂರು, ಉಳ್ಳಾಲ, ಸೋಮೇಶ್ವರ, ಕಟೀಲು, ಬಿಳಿಕುಲ, ನಿಸರ್ಗಧಾಮ, ಧರ್ಮಸ್ಥಳ ವೇಲೂರು ಈ ಎಲ್ಲವನ್ನೂ ಸಿ ಗುಂಪಿನಲ್ಲಿ ಸೇರಿಸಲಾಗಿದೆ. ಹಾಗೂ ಮಂಗಳೂರು ನಗರ ಕಾರ್ಪೊರೇಷನ್ ವ್ಯಾಪ್ತಿ ಪ್ರದೇಶಕ್ಕೆ ಅನ್ವಯಿಸುವ ಪ್ರದೇಶವನ್ನು ಬಿಟ್ಟು ನಾವು ಒಂದು ಕಿಲೋಮಿಟರ್ ಕಡಲತೀರದಲ್ಲಿ ಇ ಗುಂಪಿನಲ್ಲಿ ಸೇರಿಸಲಾಗಿದೆ. ಉಳಿದ ಸ್ಥಳಗಳು ಬಿ ಗುಂಪಿನಲ್ಲಿ ಬರುತ್ತವೆ. ಇಲ್ಲಿ ಖಾಸಗಿ ಉದ್ಯಮಗಳು ಕೈಗೊಳ್ಳುವ ಪ್ರವಾಸೋದ್ಯಮ ಯೋಜನೆಗಳಿಗೆ ಶೇಕಡ 15 ರಿಂದ 30 ರಷ್ಟು ಸಹಾಯಧನ ನೀಡಲಾಗುತ್ತದೆ. ಹಾಗೂ

ವಿದ್ಯುತ್ ದರ, ಮಾರಾಟ ತೆರಿಗೆ, ವಿಲಾಸಿ ತೆರಿಗೆಗಳಲ್ಲೂ ಕೂಡ ಟ್ಯಾಕ್ಸ್ ಶುಲ್ಕ, ನೋಂದಣಿ ಶುಲ್ಕಗಳಲ್ಲಿ 3 ರಿಂದ 7 ಪರ್‌ಸೆಂಟ್‌ವರಗೆ ವಿನಾಯಿತಿ ಮತ್ತು ರಿಯಾಯಿತಿಗಳನ್ನು ನೀಡಲಾಗುತ್ತದೆ. ಈ ಜಿಲ್ಲೆಯಲ್ಲಿ ಪ್ರವಾಸೋದ್ಯಮ ಘಟಕಗಳನ್ನು ಸ್ಥಾಪಿಸಲು ಹೆಚ್ಚಿನ ಅವಕಾಶವಿದ್ದು ಅದರಲ್ಲಿಯೂ ಬೀಚ್ ರಿಸಾರ್ಟ್‌ಗಳನ್ನು ಕೇರಳ ಹಾಗೂ ಗೋವಾ ಮಾದರಿಯಲ್ಲಿ ಮಾಡಲು ಖಾಸಗಿ ಉದ್ಯಮಗಳು ಮುಂದೆ ಬಂದರೆ ಅವರಿಗೆ ಪ್ರೋತ್ಸಾಹ ಕೊಟ್ಟು ನಮ್ಮ ಸರ್ಕಾರದಿಂದ ಲಭಿಸುವ ಎಲ್ಲಾ ಸೌಲಭ್ಯಗಳನ್ನು ಒದಗಿಸಿಕೊಡಲಾಗುತ್ತದೆ.

ಶ್ರೀ ಎನ್.ಯೋಗೇಶ್ ಭಟ್ : ಮಾನ್ಯ ಅಧ್ಯಕ್ಷರೇ, ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ 5 ಕೋಟಿ ರೂಪಾಯಿ ಪರಿಹಾರಧನವನ್ನು ಕೊಟ್ಟಲ್ಲಿ 120 ಕೋಟಿ ರೂಪಾಯಿ ನೆರವು ಬರುತ್ತದೆ. ಅನೇಕ ಅಂತರಾಷ್ಟ್ರೀಯ ಮಟ್ಟದಲ್ಲಿ ಪ್ರವಾಸಿಗರೂ ಕೂಡ ಬರುವುದಕ್ಕೆ ಸಾಧ್ಯವಾಗುತ್ತದೆ. ಈ ನಿಟ್ಟಿನಲ್ಲಿ ಹಲವು ತಿಂಗಳಿಂದ ಪೆಂಡಿಂಗ್ ಇರುವ ಫೈಲನ್ನು ಕ್ಲಿಯರ್ ಮಾಡಿ ನಿರ್ವಸಿತರಿಗೆ ಬೇಕಾಗುವ ಪುನರ್‌ವಸತಿ ಮತ್ತೆ ಪರಿಹಾರವನ್ನು ಕೊಡಲು ಸಾಧ್ಯವೇ ? ಅದನ್ನು ತಕ್ಷಣ ಮಾಡಿದಲ್ಲಿ 120 ಕೋಟಿ ರೂಪಾಯಿ ಕೇಂದ್ರದ ನೆರವು ನಮಗೆ ಬರಲಿಕ್ಕೆ ಸಾಧ್ಯವಾಗುತ್ತದೆ. ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಆಗುತ್ತದೆ. ಈ ನಿಟ್ಟಿನಲ್ಲಿ ಮಾನ್ಯ ಮುಖ್ಯಮಂತ್ರಿಗಳು ಉತ್ತರಿಸಬೇಕೆಂದು ಹೇಳುತ್ತೇನೆ.

ಅಧ್ಯಕ್ಷರು : 5 ಕೋಟಿ ರೂ ರಿಲೀಸ್ ಮಾಡಿ ಎಂದು ಫೈಲ್ ಬಂದಿದೆಯಂತೆ. ಅಂತರ್‌ರಾಷ್ಟ್ರೀಯ ವಿಮಾನ ನಿಲ್ದಾಣ ಎಂದು ಹೇಳುತ್ತಾರೆ. 120 ಕೋಟಿ ರೂಪಾಯಿಗಳನ್ನು ಸೆಂಟ್ರಲ್ ಗೌರ್ನಮೆಂಟ್‌ನವರು ಕೊಡುತ್ತಾರಂತೆ 5 ಕೋಟಿ ರೂ ಬಗ್ಗೆ ತಮ್ಮ ಕಡೆಗೆ ಫೈಲ್ ಇದೆ ಎಂದು ಹೇಳುತ್ತಾರೆ.

ಶ್ರೀ ಜೆ.ಹೆಚ್.ಪಟೇಲ್ (ಮುಖ್ಯಮಂತ್ರಿಗಳು) : ಪ್ರಪೋಸಲ್ಸ್ ಕಳುಹಿಸಿದ್ದರೆ ನಾನು ಒಪ್ಪುತ್ತೇನೆ.

ಶಿವಮೊಗ್ಗ ಜಿಲ್ಲೆಯಲ್ಲಿನ ರಸ್ತೆಗಳಿಗೆ ಹಣ ಬಿಡುಗಡೆ

123 (904) ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

(ಅ) ಶಿವಮೊಗ್ಗ ಜಿಲ್ಲೆಯಲ್ಲಿ ಇತ್ತೀಚೆಗೆ ಬಿದ್ದ ಭಾರೀ ಮಳೆಯಿಂದ ಲೋಕೋಪಯೋಗಿ ಇಲಾಖೆಯ ಬಹಳಷ್ಟು ರಸ್ತೆಗಳು ಕೆಟ್ಟು ಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

(ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರವು ತೆಗೆದುಕೊಂಡ ಕ್ರಮಗಳೇನು ?

(ಇ) ರಸ್ತೆಗಳ ದುರಸ್ತಿಗಾಗಿ ಬಿಡುಗಡೆ ಮೊದಲಾದ ಹಣ ಎಷ್ಟು ?

ಶ್ರೀ ಉಮೇಶ್ ವಿ. ಕತ್ತಿ (ಲೋಕೋಪಯೋಗಿ ಸಚಿವರು) :

ಅ) ಬಂದಿದೆ.

ಆ) ಲೋಕೋಪಯೋಗಿ ಇಲಾಖೆಯಲ್ಲಿ ಲಭ್ಯವಿರುವ ವಾರ್ಷಿಕ ರಸ್ತೆ ದುರಸ್ತಿ ನಿರ್ವಹಣೆ ಅನುದಾನ ಮತ್ತು ಮಳೆ ಹಾನಿ ಅನುದಾನ ಹಾಗೂ ಜಿಲ್ಲಾಧಿಕಾರಿಗಳ (ಸಿ.ಆರ್.ಎಫ್) ಅನುದಾನಗಳನ್ನು ಉಪಯೋಗಿಸಿಕೊಂಡು ರಸ್ತೆಗಳನ್ನು ದುರಸ್ತಿ ಮಾಡಲು ಈಗಾಗಲೇ ಕ್ರಮ ಕೈಗೊಳ್ಳಲಾಗಿದ್ದು, ವಾಹನ ಸಂಚಾರಕ್ಕೆ ಯೋಗ್ಯವಿರಲು ಸರ್ವ ಪ್ರಯತ್ನ ಮಾಡಲಾಗುತ್ತಿದೆ.